ದಿನಾಂಕ 12-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1, 2, 4, 6, 7, 9, 10 ಮತ್ತು 26 ಪರ ಶ್ರೀ ಯು.ಎಸ್.ಕೆ., ವಕೀಲರಿಂದಃ**

ನಾನು ಡಿ.ಎಂ.ಎಲ್.ಟಿ ವ್ಯಾಸಂಗ ಮಾಡಿರುತ್ತೇನೆ. ನಾನು ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಸರ್ವೇಕ್ಷಣ ಘಟಕದಲ್ಲಿ ಲ್ಯಾಬ್ ಟೆಕ್ನೀಷಿಯನ್ ಕೆಲಸ ಮಾಡುತ್ತಿದ್ದೇನೆ. ನಾನು 2011 ರಿಂದ ಉದ್ಯೋಗನಿರತಳಾಗಿರುತ್ತೇನೆ. ನಾನು ಪುತ್ತೂರಿನ ಸುಬ್ರಹ್ಮಣ್ಯ ನಗರದಲ್ಲಿ ಜನಿಸಿರುತ್ತೇನೆ. ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಉಡುಪಿಯಲ್ಲಿ ಪೂರೈಸಿರುತ್ತೇನೆ. ಆದರೆ ಮೊದಲನೇ ತರಗತಿ ವಿದ್ಯಾಭ್ಯಾಸ ಬಾಂಬೆಯಲ್ಲಿ ಮಾಡಿರುತ್ತೇನೆ. ನನ್ನ ಮದುವೆ 2014 ರಲ್ಲಿ ಆಗಿರುತ್ತದೆ. ನನ್ನ ಗಂಡನ ಹೆಸರು ಫ್ರಾಂಕಿ ಡಿ ಸೋಜ ಆಗಿರುತ್ತದೆ. ಅವರು ಅನ್ಯಧರ್ಮದವರು.

2. ನನ್ನ ತಂದೆ ಅವರ 14 ನೇ ವಯಸ್ಸಿನಲ್ಲಿ ಮುಂಬೈಗೆ ಹೋಗಿ ಅಡುಗೆ ಕೆಲಸ ಮಾಡುತ್ತಿದ್ದರು. ಮಹಾರಾಷ್ಟ್ರದ ಮರಳಿ ಎನ್ನುವ ಜಾಗದಲ್ಲಿ ಅಡುಗೆ ಕೆಲಸ ಮಾಡುತ್ತಿದ್ದರು. ನನ್ನ ತಂದೆಗೆ ನಿವೃತ್ತಿ ಪೂರ್ವದಲ್ಲಿ ಸುಮಾರು ಇಪ್ಪತ್ತು ಸಾವಿರ ತನಕ ಸಂಬಳ ಬರುತ್ತಿತ್ತು. ನನ್ನ ತಂದೆ ಅಡುಗೆ ಕೆಲಸ ಬಿಟ್ಟು ಬೇರೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ. ಮುಂಬೈ ಜೀವನ ದುಬಾರಿ ಎಂದರೆ ಸಾಕ್ಷಿ ನಮಗೆ ಯಾವುದೇ ಕಷ್ಟ ಬರಲಿಲ್ಲ ಎನ್ನುತ್ತಾರೆ. ನನ್ನ ವಿದ್ಯಾಭ್ಯಾಸಕ್ಕಾಗಿ ನಾನು ಉಡುಪಿಯಲ್ಲೇ ವಾಸವಿದ್ದೆನು.

3. ನನಗೆ ಅಳಿಯ ಸಂತಾನ ಕಟ್ಟಳೆ ಬಗ್ಗೆ ಮಾಹಿತಿ ಇದೆ. ದಾವಾ 7 ನೇ ತಪಶೀಲು ಆಸ್ತಿ ಸರ್ವೆ ನಂಬ್ರ 241/2 ಎ ಭೂ ನ್ಯಾಯ ಮಂಡಳಿಯಿಂದ ಅಳಿಯ ಸಂತಾನ ಕುಟುಂಬದ ಪರವಾಗಿ ಬಂದ ಆಸ್ತಿ ಆಗಿರುತ್ತದೆ. ಸದರಿ ಆಸ್ತಿ ಅಂಗಾರ ಪೂಜಾರಿ ಇವರಿಗೆ ಸರಕಾರದಿಂದ ಮಂಜೂರಾದ ದರ್ಖಾಸ್ತು ಆಸ್ತಿ ಎಂದರೆ ಸಾಕ್ಷಿ, ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎನ್ನುತ್ತಾರೆ. ಸದರಿ ಆಸ್ತಿ ಅಂಗಾರ

ಪೂಜಾರಿಯವರಿಗೆ ವೈಯಕ್ತಿಕ ನೆಲೆಯಲ್ಲಿ ಅರ್ಹತೆ ಮೇರೆಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಅಳಿಯ ಸಂತಾನ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಅಳಿಯ ಸಂತಾನ ಕುಟುಂಬ ಆಸ್ತಿ ಎಂದು ತೋರಿಸಲು ಭೂ ನ್ಯಾಯ ಮಂಡಳಿ ದಾಖಲೆಗಳು ಇವೆ. ಸಾಕ್ಷಿದಾರರಿಗೆ ವಾದಿ ಪರ ನಿಶಾನೆಗೊಳಿಸಿದ ದಾಖಲೆ ತೋರಿಸಲಾಗಿ ಸಾಕ್ಷಿದಾರರು ದಾಖಲೆಗಳನ್ನು ಪರಿಶೀಲಿಸಿ ಹೇಳಲು ನನಗೆ ಬರುವುದಿಲ್ಲ ಎನ್ನುತ್ತಾರೆ. ನಿಪಿ.2 ಮತ್ತು 3ರ ಪ್ರಕಾರ ಸದರಿ ಆಸ್ತಿ ಅಂಗಾರ ಪೂಜಾರಿಯ ವೈಯಕ್ತಿಕ ಹೆಸರಿಗೆ ಮಂಜುರಾಗಿದೆ ಎಂದರೆ ಸರಿಯಲ್ಲ.

4. ದಾವಾ ತಪಶೀಲು ಆಸ್ತಿ ನಂಬ್ರ 1 ರಿಂದ 6ನ್ನು ಕೂಕ್ರ ಪೂಜಾರಿ ಬೇಸಾಯ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅವರುಗಳ ಹೆಸರು ಅಂಗಾರ ಪೂಜಾರಿ, ಶೇಷಿ ಪೂಜಾರ್ತಿ, ತುಂಗು ಪೂಜಾರ್ತಿ ಹಾಗೂ ಲಕ್ಷೀ ಪೂಜಾರ್ತಿ ಆಗಿತ್ತು. ಸದರಿ ನಾಲ್ಕು ಜನರ ಕುಟುಂಬದ ಮೂಲ ಪುರುಷ ಕೂಕ್ರ ಪೂಜಾರಿ ಎಂದರೆ ಸರಿ. ಸದರಿ ಆಸ್ತಿಯ ಚಾಲಗೇಣಿ ಧಣಿ ಶ್ರೀಕಾಂತ್ ಆಚಾರ್ಯ ಆಗಿದ್ದರು. ಮೊದಲು ಚಾಲಗೇಣಿಯನ್ನು ಕೂಕ್ರ ಪೂಜಾರಿ ಪಾವತಿಸುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯಲ್ಲಿ 95 ಸೆಂಟ್ಸ್ ಗುಡ್ಡ ಆಸ್ತಿ, 18 ಸೆಂಟ್ಸ್ ಭಾಗಾಯ್ತು, 43 ಸೆಂಟ್ಸ್ ಗದ್ದೆ ಆಸ್ತಿ ಇದೆ.

5. ಅಂದಾಜು 2019ರಲ್ಲಿ ನನ್ನ ತಂದೆ ಮುಂಬೈಯಿಂದ ಖಾಯಂ ಆಗಿ ಉಡುಪಿಗೆ ಬಂದು ನೆಲೆಸಿರುತ್ತಾರೆ. ಶೇಷಿ ಪೂಜಾರ್ತಿ ನನ್ನ ತಂದೆಯ ತಾಯಿ ಎಂದರೆ ಸರಿ. ಅವರು ಜುಲೈ 2004ರಲ್ಲಿ ಮೃತಪಟ್ಟಿರುತ್ತಾರೆ. ಮೃತ ಪಡುವ ಒಂದು ತಿಂಗಳು ಅವರಿಗೆ ದೈನಂದಿನ ಕೆಲಸ ಮಾಡಲು ಆಗುತ್ತಿರಲಿಲ್ಲ, ಅದಕ್ಕಿಂತ ಮೊದಲು ಅವರ ಕೆಲಸ ಅವರೇ ಮಾಡುತ್ತಿದ್ದರು. ಸದರಿ ಶೇಷಿ ಪೂಜಾರ್ತಿ ನಿಮ್ಮ ತಂದೆಗೆ ಆಸ್ತಿ ವಿಚಾರದಲ್ಲಿ ಮೋಸ ಮಾಡಿದ್ದಾರಾ ಎಂದರೆ ಸಾಕ್ಷಿ ನನ್ನ ಅಜ್ಜಿಗೆ ಬೇರೆಯವರು ಮೋಸ ಮಾಡಿದ್ದಾರೆ ಎನ್ನುತ್ತಾರೆ. ಶೇಷಿ ಪೂಜಾರ್ತಿಯವರಿಗೆ ಲೋಕ ಜ್ಞಾನ ಇತ್ತು ಎಂದರೆ ಸಾಕ್ಷಿ ವಿದ್ಯಾಭ್ಯಾಸ ಇರಲಿಲ್ಲ ಎನ್ನುತ್ತಾರೆ. ಸದರಿ ಶೇಷಿ ಪೂಜಾರ್ತಿಯವರಿಗೆ ನನ್ನ ತಂದೆ ಅಲ್ಲದೆ ಮೂರು ಜನ ಮಕ್ಕಳು ಇರುತ್ತಾರೆ.

ದಾವಾ ಆಸ್ತಿಗಳಲ್ಲಿ ನನ್ನ ಮೃತ ತಂದೆಗೆ ಮತ್ತು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿನಾಂಕ 12-09-1999 ರಂದು ವಿಭಾಗ ಪತ್ರ ನೋಂದಾವಣಿ ಆಗಿದೆ ಎಂದರೆ ಸಾಕ್ಷಿ ನನ್ನ ತಂದೆಯನ್ನು ಬಿಟ್ಟು ಮೋಸ ಮಾಡಿದ್ದಾರೆ ಎನ್ನುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.